# ನಂಜನಗೂಡಿನ ರಸಬಾಳೆಯೂ ಅಣ್ಣಾವ್ರ ಸಿಹಿ ನೆನಪೂ...

**ರಾಜ್‌ಕುಮಾರ್ ಅವರನ್ನು ಭೇಟಿ ಮಾಡಿದ ಬಹುಪಾಲು ಎಲ್ಲರೂ, ತಮ್ಮ ಜೊತೆಯಲ್ಲಷ್ಟೇ ನಡೆದಿರಬಹುದಾದಂಥ, ತಾವಷ್ಟೇ ಕಾಪಿಟ್ಟುಕೊಳ್ಳಬಹುದಾದಂಥ ಅಪೂರ್ವ ಅನುಭವ, ನೆನಪೊಂದನ್ನು ಎದೆಯಲ್ಲಿಟ್ಟುಕೊಂಡಿರುತ್ತಾರೆ. ಅಂಥ ಸವಿನೆನಪೊಂದು ಇಲ್ಲಿ ರಸಬಾಳೆಯೊಂದಿಗೆ ಮಿಳಿತಗೊಂಡಿದೆ.**

**■ ನಾಗೇಂದ್ರ ಎಚ್.ಎಸ್.**



ನಂಜನಗೂಡಿನಲ್ಲಿರುವ ಶ್ರೀಕಂಠೇಶ್ವರನಷ್ಟೇ ಖ್ಯಾತಿ ಆ ಊರಿನ ರಸಬಾಳೆ ಹಣ್ಣಿನದು. ಮಾಘ ಹಾಗೂ ಕಾರ್ತೀಕ ಮಾಸಗಳಲ್ಲಿ ಈ ಪುಟ್ಟ ಪಟ್ಟಣದ ತುಂಬೆಲ್ಲ ಹೊರ ಊರಿನ ಭಕ್ತಾದಿಗಳ ಓಡಾಟವೇ ಹೆಚ್ಚು.

ದೇವರ ದರ್ಶನದ ನಂತರ, ಕೆಲವರಿಗೆ ಬಸ್ಸು ರೈಲುಗಳ ಧಾವಂತವಾದರೆ ಮತ್ತೂ ಕೆಲವು ಕಾರಿನೊಡೆಯರಿಗೆ ಚಾಮುಂಡಿ ಬೆಟ್ಟಕ್ಕೋ, ಬಂಡೀಪುರಕ್ಕೋ ತಲುಪುವ ಕಾತರ. ಈ ಮಾರ್ಗ ಮಧ್ಯದಲ್ಲಿ ಬಹುತೇಕರು ಮರೆಯದೇ ಕೊಳ್ಳುವ ಪದಾರ್ಥ, ಪೇಟೆ ಬೀದಿಯ ಅಂಗಡಿಗಳಲ್ಲಿ ಸಿಗುವ ರಸಬಾಳೆ ಹಣ್ಣು.

ಇಲ್ಲಿನ ಹಾಗೂ ಚಾಮರಾಜನಗರದ ಪರಿಸರ–ಮಣ್ಣಿನ ಗುಣವೇ ಈ ಬಾಳೆಹಣ್ಣಿನ ಅನನ್ಯ ಪರಿಮಳ ಹಾಗೂ ರುಚಿಗೆ ಕಾರಣವಿರಬಹುದು.

ಕಳೆದ ಫೆಬ್ರುವರಿಯಲ್ಲಿ ನಾನು ನಂಜನಗೂಡಿಗೆ ಹೋದಾಗ ಅಲ್ಲೇ ದೇವಸ್ಥಾನದ ಹಿಂಭಾಗದ ಮುಖ್ಯರಸ್ತೆಯಲ್ಲಿರುವ ಬಾಳೆಹಣ್ಣಿನ ಮಂಡಿಯೊಂದಕ್ಕೆ ಹೋದೆ. ಅಂಗಡಿಯಲ್ಲೊಬ್ಬರು ಎಂಬತ್ತರ ಆಸುಪಾಸಿನ ಯಜಮಾನರೂ, ಅವರಿಗೊಬ್ಬ ಯುವ ಸಹಾಯಕನೂ ಇದ್ದ. ಬೆಲೆ ಎಷ್ಟಾದರೂ ಕೊಟ್ಟು ತರೋಣವೆಂದು ಹೋಗಿದ್ದರೂ, ವ್ಯಾಪಾರದ ಸಂಪ್ರದಾಯದಂತೆ ಅವರು ಹೇಳಿದ ರೇಟಿಗಿಂತ ಒಂದ್ಹತ್ತು ರೂಪಾಯಿ ಕಡಿಮೆಗೇ ಕೊಡುವಂತೆ ಕೇಳಿದೆ.

ಅದಕ್ಕೆ ಅವರು, ಈಗಿರುವ ಪರಿಸ್ಥಿತಿಯಲ್ಲಿ ದುಡ್ಡು ಕೊಟ್ಟರೂ ಮುಂಚಿನಷ್ಟು ವಿಪುಲವಾಗಿ ರಸಬಾಳೆ ಹಣ್ಣುಗಳು ಸಿಗುವುದಿಲ್ಲವೆಂದು ವಿವರಿಸಿ, ನನ್ನ ಊರು–ವಿವರಗಳನ್ನು ಕೇಳಿ ತಿಳಿದರು.

ಹುಡುಗನಿಗೆ ಎರಡು ರೀತಿಯ ಬಾಳೆಹಣ್ಣುಗಳನ್ನು ಪೊಟ್ಟಣಕ್ಕೆ ಹಾಕಲು ಹೇಳಿ, ಒಂದರಲ್ಲಿರುವುದನ್ನು ನಾಳೆ ತಿನ್ನಬೇಕೆಂದೂ, ಮತ್ತೊಂದನ್ನು ಈಗಲೇ ತಿನ್ನಲು ಅಡ್ಡಿಯಿಲ್ಲವೆಂದು ಹೇಳಿ, ಸ್ಯಾಂಪಲ್‌ಗೆಂದು ಅಲ್ಲೇ ತಿನ್ನಲು ಎರಡು ಹಣ್ಣುಗಳನ್ನು ಕೊಟ್ಟು ಈ ಎರಡಕ್ಕೆ ದುಡ್ಡು ಬೇಡವೆಂದು ನಕ್ಕರು.